**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ. ನಂ.3/2021**

ದೂರುದಾರರುಃ ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೋಲಿಸ್ ಠಾಣೆ.

**ವಿರುದ್ಧ**

ಆರೋಪಿತರುಃ

1. ಪ್ರಭು ತಂದೆ ನಂದಪ್ಪ,ವಯಸ್ಸು: 32 ವರ್ಷಗಳು,
ಉಃ ಚಾಲಕ, ಸಾಃ ರುಕ್ಮಾಪೂರು,
ತಾಃ ಸುರಪುರ, ಜಿಃ ಯಾದಗಿರಿ.

4. ಕುಮಾರ @ ಕುಮ್ಯಾ ತಂದೆ ಯಮನಪ್ಪ ಚವ್ಹಾಣ್,
ವಯಸ್ಸು: 30 ವರ್ಷಗಳು, ಸಾಃ ಜಾಪಲನಾಯ್ಕ್ ತಾಂಡ,
(ಕನ್ಯಾಕೋಳೂರು), ತಾಃ ಶಹಪೂರ.

**ದೋಷರೋಪಣೆ**

ಶ್ರೀ. ಸುರೇಶ ಅಣ್ಣಪ್ಪ ಸವದಿ., ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು, ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮಗಳ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ–

ದಿನಾಂಕ 27.09.2020 ರಂದು ಬೆಳಗಿನ ಜಾವ 02.00 ರಿಂದ 03.00 ಗಂಟೆ ಅವಧಿಯಲ್ಲಿ ಜಾಲಹಳ್ಳಿ ಪೊಲೀಸ್ ಠಾಣಾ ಸರಹದ್ದು, ದೇವದುರ್ಗ ತಾಲ್ಲೂಕು, ಮುಂಡರಗಿ ಗ್ರಾಮದಲ್ಲಿ 1 ಮತ್ತು 2ನೇ ಆರೋಪಿತರಾದ ನೀವುಗಳು ಇತರೆ ಆರೋಪಿತರೊಂದಿಗೆ ಸೇರಿಕೊಂಡು ಮುಂಡರಗಿ ಗ್ರಾಮದ ಶಿವರಾಯ ದೇವಸ್ಥಾನದ ಮುಂದಿನ ಶೇಟರ್ ಬಾಗಿಲಿಗೆ ಹಾಕಿದ ಪತ್ತ ಮುರಿದು ಒಳಗೆ ಪ್ರವೇಶಿಸಿ ಗರ್ಭಗುಡಿ ಬಾಗಿಲಿನ ಕಿಲಿಯನ್ನು ಕಳ್ಳತನ ಮಾಡುವ ಉದ್ದೇಶದಿಂದ ಮುರಿದು ಒಳಗೆ ಪ್ರವೇಶಿಸಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ 457 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ಮತ್ತು 4ನೇ ಆರೋಪಿತನಾದ ನೀವುಗಳು ಇತರೆ ಆರೋಪಿತರೊಂದಿಗೆ ಸೇರಿ ಗರ್ಭಗುಡಿಯಲ್ಲಿದ್ದ 1) ಶಿವರಾಯ ತಾತನ 12 ತೊಲೆ ಬೆಳ್ಳಿ ಮೂರ್ತಿ, 2) 9 ವರೆ ತೊಲೆಯ ಬೆಳ್ಳಿಯ ಚಟ್ಟಿ

(ಪ್ರಾಬವಳಿ), 3) 15 ತೊಲೆಯ ಬೆಳ್ಳಿಯ ಚಂದ್ರಾಯುಧ (ಕೊಡಲಿ), 4) 10 ತೊಲೆ 2 ಬೆಳ್ಳಿಯ ಲಿಂಗದಕಾಯಿ ಹಾಗೂ 5) 5 ತೊಲೆಯ ಬೆಳ್ಳಿಯ ಶಿವನ ಮೂರ್ತಿ ಹಿಗೆ ರೂ.3,70,500/– ಬೆಲೆ ಬಾಳುವವುಗಳನ್ನು ಕಳ್ಳತನ ಮಾಡುವ ಮೂಲಕ ಭಾರತ ದಂಡ ಸಂಹಿತೆ ಕಲಂ 380 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ಮತ್ತು 4 ನೇ ಆರೋಪಿತರಾದ ನೀವುಗಳು ಇತರೆ ಆರೋಪಿತರೊಂದಿಗೆ ಸೇರಿ ಕಳ್ಳತನ ಮಾಡಿದ ವಸ್ತುಗಳು ದೇವರ ವಸ್ತುಗಳನ್ನು ಯಾರು ಖರೀದಿಸುವುದಿಲ್ಲಾ ಅಂತಾ ತಿಳಿದು ಅವುಗಳನ್ನು ಕರಗಿಸಿ ಬೆಳ್ಳಿ ಗಟ್ಟಿ ಮಾಡಿ ಸಾಕ್ಷಾಧಾರಗಳನ್ನು ನಾಶಪಡಿಸಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ.201 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 18.07.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ,**

**ದೇವದುರ್ಗ.**

**ಸಿ.ಸಿ. ನಂ.3/2021**

ದೂರುದಾರರುಃ ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೋಲಿಸ್ ಠಾಣೆ.

**ವಿರುದ್ದ**

ಆರೋಪಿತರುಃ

1. ಪ್ರಭು ತಂದೆ ನಂದಪ್ಪ,ವಯಸ್ಸು: 32 ವರ್ಷಗಳು,
ಉಃ ಚಾಲಕ, ಸಾಃ ರುಕ್ಮಾಪೂರು,
ತಾಃ ಸುರಪುರ, ಜಿಃ ಯಾದಗಿರಿ.

4. ಕುಮಾರ @ ಕುಮ್ಯಾ ತಂದೆ ಯಮನಪ್ಪ ಚವ್ಹಾಣ್,
ವಯಸ್ಸು: 30 ವರ್ಷಗಳು, ಸಾಃ ಜಾಪಲನಾಯ್ಕ್ ತಾಂಡ,
(ಕನ್ಯಾಕೋಳೂರು), ತಾಃ ಶಹಪೂರ.

:: **ಆಪಾದನೆ** ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ-

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ-

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ದೇವದುರ್ಗ.

ಆರೋಪಿತರ ಸಹಿ